ಸಂದರ್ಭದಲ್ಲಿ ಯಾರಿಗಾದರೂ ಹೀಗೆ ಅನಿಸುತ್ತಿರುತ್ತದೆ. ಹೀಗೆ ನಾವು ಆಯ್ಕೆ ಮಾಡಿಕೊಂಡೇ ವರ್ತಿಸುತ್ತಿದ್ದಲ್ಲಿ ನಮ್ಮ ಸಂಬಂಧದ ಪರಿಕಲ್ಪನೆಯು ಸಾಪೇಕ್ಷವೆಂದೇ ಒಪ್ಪಿಕೊಳ್ಳಬೇಕಾಗುತ್ತದೆ. ಬೇಂದ್ರೆಯವರ 'ಸಖೀಗೀತ' – ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ? ಎನ್ನುತ್ತ ಪ್ರೇಮ ದಾಂಪತ್ಯದ ಪರಮೋಚ್ಚ ನಿಲುವನ್ನು ಹೀಗೆ ತಲುಪುತ್ತದೆ.



**ಮಾಡದಿರು ಬಾಳನ್ನು ಬೇಳೆಯಂತೆ**
**ಕೂಡಿರಲಿ ಬಾಳು ಇಡಿಗಾಳಿನಂತೆ**
**ಹೊಸ ಹುಟ್ಟು ಬರುವುದಿದೆ ಇನ್ನು ಮುಂದೆ**
**ಆಗೋಣ ಈ ಜಗದ ತಾಯಿತಂದೆ**

ಹೀಗೆ ಸಂಬಂಧವನ್ನು ತಾತ್ವೀಕರಿಸಿ ಉದಾತ್ತ ನೆಲೆ ತಲುಪುವಲ್ಲಿ ಸಂಬಂಧದ ವ್ಯಾಖ್ಯೆ ಒಂದು ದರ್ಶನವೇ ಆಗುತ್ತದೆ. ಕೆ.ಎಸ್. ನರಸಿಂಹಸ್ವಾಮಿಯವರು ತಮ್ಮ ಕವಿತೆಗಳಲ್ಲಿ ಪ್ರೇಮ ಹಾಗೂ ದಾಂಪತ್ಯದ ಭಾವ ಸೂಕ್ಷ್ಮಗಳನ್ನು ಎಳೆಎಳೆಯಾಗಿ ಜೋಡಿಸುತ್ತ ಒಲವಿನ ವ್ಯಾಖ್ಯೆ ರಚಿಸಿದ್ದಾರೆ. ಇವರ ಆಶಯ ಉದಾತ್ತತೆಗಳು ನಮ್ಮ ಕೌಟುಂಬಿಕ ಬದುಕಿನ ತಿಳಿವಳಿಕೆಯ ಶ್ರೇಷ್ಠ ಮಾದರಿಗಳಂತೆ ಎಲ್ಲರಿಗೂ ಗೋಚರಿಸಿದೆ. ಆದರೆ, ಇದೆಲ್ಲ ಕವಿಗಳ ಸ್ವಗತವಾಗಿದೆಯೇ ವಿನಾ 'ಸಖಿ'ಯ ಮಾತುಗಳಲ್ಲವಲ್ಲ? ಅವರೆಲ್ಲಿ ಹೋದರು? ಈ ಏಕಮುಖ ಸಂವಹನವು ಸಂಬಂಧದ ಒಂದು ಮಗ್ಗುಲನ್ನು ಮಾತ್ರ ತೋರಿಸುವುದಲ್ಲ? ಎಂಬ ಮಾತೂ ಇದೆ. ಹಾಗೆಂದು ತರ್ಕಬದ್ಧ, ಸಂವಾದಗಳನ್ನು ಇರಿಸಿಕೊಂಡು ಕಾವ್ಯನ್ಯಾಯ ಒದಗಿಸಲಾಗದು. ಆದರೆ, ಸಂಬಂಧದ ಉನ್ನತ ಸ್ಥಿತಿಯಲ್ಲಿ ನಿಂತು ಬರೆಯುವಾಗ ಅದರೊಳಗೆ ಅಸಂಬಂಧದ ಸುಳಿಯೊಂದು ತನ್ನ ಕೆಲಸ ಮಾಡುತ್ತಿರುತ್ತದೆ ಎಂದು ಮರೆಯಲಾಗದು ಅಲ್ಲವೇ? ಸಖಿಯರ ಪ್ರತಿಸ್ಪಂದನದ ಅನುಪಸ್ಥಿತಿಯ ಬಗ್ಗೆ ಅದನ್ನು ಎತ್ತಿ ತೋರಿಸಿ, ಪ್ರಶ್ನಿಸಿದ ಬರಹಗಾರ ಕುಸುಮಾಕರ ದೇವರಗೆಣ್ಣೂರ ಅವರನ್ನೇ ಪತ್ನಿ ಪ್ರಶ್ನಿಸಿದ ಪ್ರಕರಣವೊಂದನ್ನು ಅವರೇ ಹೇಳಿಕೊಂಡಿದ್ದಾರೆ. (ದೇಶಕಾಲ – 11) 'ನಾನು ಸಾಮಾನ್ಯ ಹೆಣ್ಣು ಮಗಳು. ನನಗೆ ಸಾಮಾನ್ಯ ಆಸೆ ಆಕಾಂಕ್ಷೆಗಳಿವೆ. ನಾವು ಸಾಮಾನ್ಯರಾಗಿ ಬದುಕೋಣ. ಜಗತ್ತಿನ ತಾಯಿತಂದೆಯರೋ ಕ್ರಾಂತಿಕಾರರೋ ಆಗೋ ಅಪೇಕ್ಷೆ ನನಗಿಲ್ಲ. ಇಲ್ಲದ ಭಾರವನ್ನು ಹೊತ್ತುಕೊಂಡು ನಾವ್ಯಾಕೆ ಮರುಗಬೇಕು?' ಅಂದರೆ, ಇಲ್ಲಿಯ ಸಂಬಂಧದ ಕಲ್ಪನೆಗಳು ಒಂದು ಇನ್ನೊಂದಕ್ಕೆ ಅಸಂಬಂಧವಾಗಿ ಗೋಚರವಾಗಿರಬಹುದಲ್ಲವೇ? ಜಗತ್ತಿನ ಪರಿಧಿಯಿದ್ದಾಗ ಮಾತ್ರ ವ್ಯಾಪಕ ನಿಲುವು ಎಂಬುದನ್ನು ಸುಳ್ಳಾಗಿಸುವಂತೆ ಹೊಸಿಲೊಳಗಿನ ಬದ್ಧತೆಯೂ ವ್ಯಾಪಕವೇ ಎಂಬುದನ್ನು ಇದು ತೋರುತ್ತಿರುವಂತೆ ಕಂಡಿದೆ.

ಇಲ್ಲಿ ನಾವು ತಿಳಿಯಬೇಕಿರುವುದು ಸಖಿಯರು ಮಾತನಾಡಿದಾಗಲೂ